**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಮುಳಬಾಗಿಲು**

**ಸಿಸಿ. ನಂಬರ್ 1922/2024**

ಫ್ರಾ.ಸಾಃ **8**

ಚಾಸಾಃ **19**

**ದಿನಾಂಕಃ30.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರು | : ಕೆ. ಜಿ.ಸತೀಶ್ |
| ತಂದೆಯ | : ದಿವಂಗತ ಗೋವಿಂದಪ್ಪ |
| ವಯಸ್ಸು | : 47 ವರ್ಷ |
| ಕೆಲಸ | : ವೃತ್ತ ನೀರಿಕ್ಷಕರು |
| ವಾಸ ಸ್ಥಳ | : ಮುಳಬಾಗಿಲು ಗ್ರಾಮಾಂತರ ವೃತ್ತ |

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ**

2023 ಆಗಸ್ಟ್ ನಿಂದ ಇಲ್ಲಿಯವರೆಗೂ ಸಿಪಿಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ 20.12.2023 ರಂದು ಚಾಸಾ18 ರವರಿಂದ ಕಡತವನ್ನು ಪಡೆದು ತನಿಖೆ ಮುಂದುವರೆಸಿರುತ್ತೇನೆ. ಅದೇ ದಿನ ಚಾಸಾ 15 ರವರಿಂದ ಪಿಎಂ ವರದಿಯನ್ನು ಪಡೆದಿರುತ್ತೇನೆ. ಸದರಿ ಪಿಎಂ ವರದಿಯನ್ನು ನಿಪಿ 13, ಸಾಕ್ಷಿಯ ಸಹಿಯನ್ನು ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ 2 ರಿಂದ 4 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾದಾರಗಳು ದೊರಕಿದ್ದರಿಂದ ನ್ಯಾಯಾಲಯಕ್ಕೆ ದಿಃ 27.12.2023 ರಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್ ಬಿಎ ರವರಿಂದಃ**

ಚಾಸಾ 2 ರಿಂದ 4 ರವರನ್ನು ಒಂದೇ ದಿನ ಕರೆಸಿ, ಬೇರೆ ಬೇರೆಯಾಗಿ ಹೇಳಿಕೆಗಳನ್ನು ದಾಖಲಿಸಿರುತ್ತೇನೆ. ಚಾಸಾ 2 ರಿಂದ 4 ರವರಿಗೆ ನೋಟೀಸ್ ನೀಡಿರುವುದಿಲ್ಲ. ಚಾಸಾ 2 ರಿಂದ 4 ರವರನ್ನು ಮೌಖಿಕವಾಗಿ ಕರೆಸಿರುತ್ತೇವೆ. ಯಾವ ಸಾಕ್ಷಿದಾರರನ್ನು ಎಷ್ಟು ಸಮಯದವರೆಗೆ

ವಿಚಾರಣೆ ಮಾಡಿರುತ್ತೀರಿ ಎಂದರೆ ಸುಮಾರು ವರ್ಷಗಳಾಗಿರುವುದರಿಂದ ಹೇಳಲಾಗುವುದಿಲ್ಲ. ಸಾಕ್ಷಿದಾರರನ್ನು ಪೋನ್ ಮಾಡಿ ಕರೆಸಿರುತ್ತೇವೆ. ಹೇಳಿಕೆ ದಾಖಲಿಸುವ ಹಿಂದಿನ ದಿನ ನಮ್ಮ ಸಿಬ್ಬಂದಿಯವರ ಮೂಲಕ ಪೋನ್ ಮಾಡಿರುತ್ತೇವೆ. ನಮ್ಮ ಸಿಬ್ಬಂದಿ ಸುರೇಶ್ ರವರ ಮೂಲಕ ಪೋನ್ ಮಾಡಿ ಕರೆಸಿರುತ್ತೇವೆ. ಸ್ಥಳಕ್ಕೆ ಹೋಗಿ ವಿಚಾರಣೆ ಮಾಡಿದಾಗ ಸಾಕ್ಷಿದಾರರ ಹೆಸರು, ವಿಳಾಸ, ಪೋನ್ ನಂಬರ್ ಪಡೆದಿರುತ್ತೇವೆ. ಹೋಟೆಲ್ ರವರನ್ನು ವಿಚಾರಿಸಲಾಗಿ ಸಾಕ್ಷಿದಾರರ ಮಾಹಿತಿ ತಿಳಿದುಬಂದಿರುತ್ತದೆ. ಚಾಸಾ 2 ಮತ್ತು 3 ಹೋಟೆಲ್ ರವರು.

ಅಪಘಾತ ಆದ 2-3 ದಿನಗಳ ನಂತರ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ನಾನು ಘಟನಾ ಸ್ಥಳಕ್ಕೆ ಹೋದ ದಿನಾಂಕ, ಸಮಯ ಹೇಳಲಾಗುವುದಿಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ ಠಾಣಾ ದಿನಚರಿಯಲ್ಲಿ ನಮೂದಿಸಿರುತ್ತೇವೆ. ಸದರಿ ಠಾಣಾ ದಿನಚರಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾವು ಹೋಗುವ ಮೊದಲು ಠಾಣೆಯಲ್ಲಿ ನಮೂದು ಮಾಡುವುದಿಲ್ಲ, ಬಂದ ನಂತರ ನಂತರ ಸಿಪಿಐ ಡೈರಿಯಲ್ಲಿ ನಮೂದು ಮಾಡುತ್ತೇವೆ. ಅಂತಿಮ ವರದಿಯಲ್ಲಿ ನಾನು ಸ್ಥಳಕ್ಕೆ ಹೋಗಿರುವ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋದ ದಿನಾಂಕ, ಸಮಯವನ್ನು ನಮೂದಿಸಿರುವುದಿಲ್ಲ. ನಮ್ಮ ಸಿಬ್ಬಂದಿ ಸಾಕ್ಷಿದಾರರನ್ನು ಕರೆಸಿದ್ದಾರೆ ಎಂಬುದಕ್ಕೆ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ನಾನು ಯಾವುದೇ ಸಾಕ್ಷಿದಾರರನ್ನು ನೋಡಿಲ್ಲ, ಅವರನ್ನು ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ಅಂತಿಮ ವರದಿಯ ಸಲುವಾಗಿ ಹೇಳಿಕೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸ. ಇದೆ

ಸಹಿ/–
(ಶ್ರೀಮತಿ ರೋಹಿಣಿ. ಡಿ)
ಅಪರ ಸಿ.ಜೆ ಮತ್ತು ಜೆಎಂಎಫ್ ಸಿ
ಮುಳಬಾಗಿಲು